ಸ್ವಾಮಿ ವಿವೇಕಾನಂದರ ಸಾನ್ನಿಧ್ಯಲಾಭ ಪಡೆದ ಭಾಗ್ಯವಂತ ಭಾರತೀಯ ನಾರಿಯರು

# ಸುಶೀಲಾ ಮಾಥುರ್

ಡಾ. ಶೈಲಜಾ ಆಮೂರ

ಸ್ವಾಮಿ ವಿವೇಕಾನಂದರ ಪರಿವ್ರಾಜಕ ಜೀವನವನ್ನು ನಾವು ಅವಲೋಕಿಸಿದಾಗ ರಾಜಸ್ಥಾನದ ಆಳ್ವಾರ್‌ನೊಂದಿಗೆ ಸ್ವಾಮೀಜಿಯವರಿಗೆ ಒಂದು ವಿಶೇಷ ಬಾಂಧವ್ಯ ಇದ್ದುದನ್ನು ಕಾಣಬಹುದಾಗಿದೆ. ಪ್ರಾಚೀನ ದಿನಗಳಲ್ಲಿ 'ಮತ್ಸ್ಯದೇಶ' ಎಂದು ಪ್ರಸಿದ್ಧವಾಗಿದ್ದ ಈ ನಗರಕ್ಕೆ 'ರಾಜಸ್ಥಾನದ ಹೆಬ್ಬಾಗಿಲು' ಎಂಬ ಹೆಸರು ಕೂಡ ಇತ್ತು. ಪಾಂಡವರು ತಮ್ಮ ವನವಾಸದ ಕೊನೆಯ ದಿನಗಳನ್ನು ಆಳ್ವಾರ್‌ನಲ್ಲಿಯೇ ಕಳೆದರು ಎಂದು ಹೇಳಲಾಗುತ್ತದೆ. ಆರಾವಳಿ ಬೆಟ್ಟಗಳ ಮಡಿಲಿನಲ್ಲಿರುವ ಹಚ್ಚಹಸುರಿನ ಕಾಡುಗಳು, ಹೂಗಳು ಮತ್ತು ಬಳ್ಳಿಗಳಿಂದ ಆವೃತವಾದ ಆಳ್ವಾರ್‌ನಲ್ಲಿ ಸುಂದರವಾದ ಅರಮನೆಗಳು, ಪ್ರಶಾಂತವಾದ ಸರೋವರಗಳು, ರಾಜಮನೆತನದ ಮೈದಾನಗಳೇ ಮೊದಲಾದವುಗಳಿದ್ದು, ಅವು ಅಲ್ಲಿನ ಸೊಗಸಾದ ವಾಸ್ತುಶಿಲ್ಪವನ್ನು ಪ್ರದರ್ಶಿಸುತ್ತವೆ.

ಸ್ವಾಮಿ ವಿವೇಕಾನಂದರು ತಮ್ಮ ಜೀವಿತಾವಧಿಯಲ್ಲಿ ಆಳ್ವಾರ್‌ಗೆ ಎರಡು ಬಾರಿ ಭೇಟಿ ನೀಡಿದರು. ನಗರವನ್ನು ಪ್ರವೇಶಿಸಿದ ಮೇಲೆ ಪ್ರಪ್ರಥಮವಾಗಿ ಅವರು ನಿಮ್ನ ವರ್ಗದ ಬಡ ಜನರೊಂದಿಗೆ ಅತ್ಯಂತ ಸ್ನೇಹದಿಂದ ಜೀವನ ನಡೆಸತೊಡಗಿದರು. ರಾಮಸ್ನೇಹಿ ಎಂಬ ಒಬ್ಬ ಉತ್ತರಭಾರತದ ವೈಷ್ಣವ ವ್ಯಕ್ತಿ ಮಧುಕರಿ ಭಿಕ್ಷಾನ್ನದಿಂದ ತನ್ನ ಬದುಕು ಸಾಗಿಸುತ್ತಿದ್ದ. ಅವನು ಒಂದು ಬಿಂದಿಗೆಯನ್ನು ಒಂದು ಚಿಕ್ಕ ಕಲ್ಲಿನಿಂದ ಬಾರಿಸುತ್ತ ಭಜನೆಗಳನ್ನು ಹಾಡಿ ತನ್ನದೇ ಆನಂದದಲ್ಲಿ ವಿಹರಿಸುತ್ತಿದ್ದ. ಭಿಕ್ಷೆಯಿಂದ ದೊರಕಿದ ಹಿಟ್ಟಿಗೆ ಉಪ್ಪು ಹಾಗೂ ಮೆಣಸಿನಕಾಯಿ ಸೇರಿಸಿ, ರೊಟ್ಟಿ ಬೇಯಿಸಿ ರಾತ್ರಿ ಊಟ ಮುಗಿಸುತ್ತಿದ್ದ. ಸ್ವಾಮಿ ವಿವೇಕಾನಂದರು ಹಲವಾರು ದಿನ ಅವನ ಜೊತೆಯಲ್ಲಿಯೇ ತಾವೂ ಭಜನೆ ಹಾಡುತ್ತ ದಪ್ಪನೆಯ ರೊಟ್ಟಿಯೂಟವನ್ನೇ ಸವಿಯುತ್ತ ಆಳ್ವಾರ್‌ದಲ್ಲಿ ಕಾಲಕಳೆಯುತ್ತಿದ್ದರು. ಒಟ್ಟಿನಲ್ಲಿ, ಅಲ್ಲಿ ಆಹಾರದ ಕೊರತೆಯ ದಿನಗಳು, ದುಃಖ, ಕ್ಲೇಶಗಳಿದ್ದರೂ ನಡುವೆ ಆನಂದದ ಅನುಭೂತಿಯ ದಿನಗಳೂ ಇರುತ್ತಿದ್ದವು.

ಮೊದಮೊದಲು ಸ್ವಾಮಿ ವಿವೇಕಾನಂದರಿಗೆ ಆಳ್ವಾರ್‌ನಲ್ಲಿ ಯಾರೂ ಸರಿಯಾದ ಭೋಜನದ ವ್ಯವಸ್ಥೆ ಮಾಡಿರಲಿಲ್ಲ. ಆ ವೇಳೆಗೆ ಅಲ್ಲಿ ವಾಸಿಸುತ್ತಿದ್ದ ಒಬ್ಬ ವೃದ್ಧ ಮಹಿಳೆ ಸ್ವಾಮೀಜಿಯವರಿಗೆ ಹಲವಾರು ಬಾರಿ ಊಟ ಬಡಿಸುವ ಸುಯೋಗವನ್ನು ಹೊಂದಿದಳು. ಆಳ್ವಾರ್‌ದ 'ಚೌಕ ಬಜಾರ್' ಎನ್ನುವ ಪ್ರದೇಶದಲ್ಲಿ ಒಂದು ಪುಟ್ಟ ಗುಡಿಸಿಲಿನಲ್ಲಿ ವಾಸವಾಗಿದ್ದ ಈ ವೃದ್ಧೆ ತುಂಬ ಬಡವಿಯಾಗಿದ್ದಳು. ಅವಳ ಪತಿ ಹಾಗೂ ಒಬ್ಬನೇ ಮಗ ಕೂಡ ತೀರಿಹೋಗಿದ್ದರು. ಬಡ ವಿಧವೆಗೆ ತನ್ನ ಜೀವನೋಪಾಯಕ್ಕಾಗಿ ಇತರರ ಮನೆಗಳಲ್ಲಿ ಕೂಲಿಕೆಲಸ ಮಾಡುವ ಅನಿವಾರ್ಯತೆ ಒದಗಿಬಂದಿತು. ಅವಳು ಕೆಲವು ಮನೆಗಳಿಗೆ ಹೋಗಿ ಬೀಸುವ ಕಲ್ಲಿನಲ್ಲಿ ಗೋಧಿಯನ್ನು ಬೀಸಿ ಹಿಟ್ಟು ಮಾಡಿಕೊಡುತ್ತಿದ್ದಳು. ಅದಕ್ಕೆ ಪ್ರತಿಯಾಗಿ ಅವರು ಅವಳಿಗೆ ಸ್ವಲ್ಪ ಹಿಟ್ಟನ್ನು ನೀಡುತ್ತಿದ್ದರು. ಈ ರೀತಿ ದೊರಕಿದ ಹಿಟ್ಟಿನಿಂದ ಚಪಾತಿಗಳನ್ನು ಬೇಯಿಸಿ ತನ್ನ ಉದರ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದಳು. (ದಪ್ಪನೆಯ ಈ ಬಗೆಯ ಚಪಾತಿಗಳನ್ನು ರಾಜಸ್ಥಾನದಲ್ಲಿ ಟಿಕ್ಕಡ್ – (Tikkad) ಎಂದು ಕರೆಯುತ್ತಾರೆ. ಇದನ್ನು ಬರಿ ಗೋಧಿಯ ಹಿಟ್ಟಿನಿಂದಲೂ ತಯಾರಿಸಬಹುದು. ಕೆಲವರು ಎಲ್ಲ ಬಗೆಯ ಹಿಟ್ಟುಗಳನ್ನು ಸೇರಿಸಿ ಅದಕ್ಕೆ ಬಗೆಬಗೆಯ ತರಕಾರಿ, ಉಪ್ಪು, ಮೆಣಸಿನಕಾಯಿಗಳನ್ನು ಸೇರಿಸಿ ದಪ್ಪನೆಯ ಚಪಾತಿಗಳನ್ನಾಗಿ ಬೇಯಿಸಿ ತಯಾರಿಸುತ್ತಾರೆ. ಇದನ್ನು ಬೇಳೆಯ ಸಾರು ಅಥವಾ ಮೊಸರಿನ ಕೋಸಂಬರಿಯ ಜೊತೆ ಸೇವಿಸಲಾಗುತ್ತದೆ.) ಈ ವೃದ್ಧ ವಿಧವೆ ಯಾವ ಸಂದರ್ಭದಲ್ಲಿ, ಯಾವ ರೀತಿಯಲ್ಲಿ ಸ್ವಾಮಿ ವಿವೇಕಾನಂದರನ್ನು ಕಾಣುವ ಹಾಗೂ ಅವರಿಗೆ ಊಟ ನೀಡುವ ಸೌಭಾಗ್ಯ ಪಡೆದಳು ಎಂಬುದು ಇನ್ನೂ ತಿಳಿದಿಲ್ಲ. ಆದರೂ ಸ್ವಾಮೀಜಿ ಇವಳನ್ನು ತುಂಬ ಪ್ರೀತ್ಯಾದರಗಳಿಂದ ಕಾಣುತ್ತಿದ್ದರು ಎಂಬುದ ಶತಸತ್ಯ. ಅವಳಿಗೂ ಸ್ವಾಮೀಜಿಯ ಬಗ್ಗೆ ತುಂಬ ಅಕ್ಕರೆ ಇತ್ತು. ಪ್ರೀತಿಯಿಂದ ಅವರನ್ನು ''ನನ್ನ ಲಾಲಾ, ನನ್ನ ಮಗು'' ಎಂದೆಲ್ಲ ಸಂಬೋಧಿಸುತ್ತಿದ್ದಳು. ೧೮೯೧ನೆಯ ಇಸವಿ ಫೆಬ್ರವರಿಯಲ್ಲಿ ಆಳ್ವಾರ್‌ಗೆ ಪರಿವ್ರಾಜಕ ಸಂನ್ಯಾಸಿಯಾಗಿ ಮೊದಲನೆಯ ಬಾರಿ ಪ್ರವೇಶ ಮಾಡಿದ್ದ ಸ್ವಾಮೀಜಿ ಅತ್ಯಂತ ಬಡವರಾಗಿದ್ದ ರಾಮಸ್ನೇಹಿ ಹಾಗೂ ವೃದ್ಧ ವಿಧವೆಯರ ಪರಿಶುದ್ಧ ಪ್ರೀತಿಯಿಂದ ಅವರೊಡನೆಯೇ ಬಿಚ್ಚು ಹೃದಯದಿಂದ ವ್ಯವಹರಿಸುತ್ತಿದ್ದರು. ನಂತರದ ದಿನಗಳಲ್ಲಿ ಊರಿನ ಗಣ್ಯರು ಸ್ವಾಮೀಜಿಯವರ ವಿದ್ವತ್ತು ಹಾಗೂ ತ್ಯಾಗಗಳನ್ನು ಗುರುತಿಸಿ ಅವರನ್ನು ಆಮಂತ್ರಿಸತೊಡಗಿದರು.

೧೮೯೭ನೆ ಇಸವಿಯಲ್ಲಿ ಸ್ವಾಮಿ ವಿವೇಕಾನಂದರು ಎರಡನೆಯ ಬಾರಿ ಆಳ್ವಾರ್‌ಗೆ ಆಗಮಿಸಿದರು. ಆ ಹೊತ್ತಿಗಾಗಲೇ ಅವರ ಕೀರ್ತಿ ವಿಶ್ವವ್ಯಾಪಕವಾಗಿತ್ತು. ಅವರಿಗೆ ಭವ್ಯಸ್ವಾಗತ ಕೋರಲು ಹಲವಾರು ಜನ ಖ್ಯಾತನಾಮರು, ಊರಿನ ಗಣ್ಯರು ರೈಲು ನಿಲ್ದಾಣದಲ್ಲಿ ನೆರದಿದ್ದರು. ಅವರೆಲ್ಲರೂ ಸ್ವಾಮೀಜಿಯವ

ರನ್ನು ಮಾತನಾಡಿಸಲು ನಾ ಮುಂದು ತಾ ಮುಂದು ಎಂದು ಪೈಪೋಟಿ ನಡೆಸುತ್ತಿದ್ದರು. ಆದರೆ ಆ ವೇಳೆಯಲ್ಲಿ ಸ್ವಾಮೀಜಿಯವರ ದೃಷ್ಟಿ ಆ ಗುಂಪಿನ ಆಚೆಗೆ ವಿನೀತನಾಗಿ ನಿಂತಿದ್ದ, ಮಾಸಲು ಬಟ್ಟೆಯ ವ್ಯಕ್ತಿಯೊಬ್ಬನ ಮೇಲೆ ನೆಟ್ಟಿತ್ತು! ಸ್ವಾಮೀಜಿ ಅಲ್ಲಿಂದಲೇ ಜೋರಾಗಿ 'ರಾಮಸ್ನೇಹಿ, ಓ ರಾಮಸ್ನೇಹಿ' ಎಂದು ಆತನನ್ನು ಕೂಗಿದರು. ನೆರೆದಿದ್ದ ಗಣ್ಯರು ಆ ಬಡವನಿಗೆ ನಿರ್ವಾಹವಿಲ್ಲದೆ ದಾರಿ ಮಾಡಿಕೊಟ್ಟರು. ಸ್ವಾಮೀಜಿ ಅವನನ್ನು ಪ್ರೀತಿಯಿಂದ ಮಾತನಾಡಿಸಿ ಅವನೊಂದಿಗೆ ಒಂದಿಷ್ಟು ಸಮಯ ಕಳೆದರು.

ಒಂದು ದಿನ, ಸ್ವಾಮೀಜಿ ಬೆಳಗಿನ ವೇಳೆಯಲ್ಲಿ ಕೆಲವು ಸಹಚರರೊಡನೆ ವಾಯುವಿಹಾರಕ್ಕೆಂದು ಹೋಗಿದ್ದರು. ನೋಡುತ್ತಿದ್ದಂತೆಯೇ ಸ್ವಾಮೀಜಿ ಯಾರ ಕಣ್ಣಿಗೂ ಕಾಣದಂತೆ ಮರೆಯಾಗಿಬಿಟ್ಟಿದ್ದರು! ಅವರ ಜೊತೆಯಲ್ಲಿ ಇದ್ದ ಜನ ಅವರನ್ನು ಆಚೆ ಈಚೆ ಹುಡುಕಲಾರಂಭಿಸಿದರು. ಸ್ವಲ್ಪ ಹೊತ್ತಿನ ಮೇಲೆ ಒಂದು ಪುಟ್ಟ ಗುಡಿಸಿಲಿನಲ್ಲಿ ಸ್ವಾಮಿ ವಿವೇಕಾನಂದರು ಒಬ್ಬ ವೃದ್ಧೆಯ ಬಳಿ ಕುಳಿತಿದ್ದು ಕಂಡುಬಂದಿತು. ವೃದ್ಧ ಮಹಿಳೆ ಹಿಟ್ಟು ಕಲಸಿ 'ಟಿಕ್ಕಡ' ತಯಾರು ಮಾಡುತ್ತಿದ್ದಳು. ಎರಡನೆಯ ಭೇಟಿಯಲ್ಲಿಯೂ ತನ್ನ 'ಲಾಲಾ' ತನ್ನನ್ನು ಹುಡುಕಿಕೊಂಡು ಬಂದಿದ್ದರಿಂದ ಅವಳ ಮುಖದಲ್ಲಿ ಆನಂದ ಉತ್ಸಾಹಗಳು ಎದ್ದು ಕಾಣುತ್ತಿದ್ದವು. ಅವಳಿಗೆ ಸ್ವಾಮೀಜಿ ಎರಡನೆಯ ಬಾರಿ ಆಳ್ವಾರಿಗೆ ಬಂದಾಗಲೂ ಅವರ ಕೀರ್ತಿ, ಹಿರಿಮೆ ವಿಷಯಗಳ ಬಗ್ಗೆ ಕಿಂಚಿತ್ತೂ ಅರಿವಿರಲಿಲ್ಲ. ಅವಳು ಸ್ವಾಮೀಜಿಯವರಿಗೆ ''ಹೇ ಲಾಲಾ, ನಿನಗೆ ಗೊತ್ತಿದೆಯಾ ಒಂದು ಸಂಗತಿ? ಒಬ್ಬ ಶ್ರೇಷ್ಠ ಸಾಧು ಆಳ್ವಾರಿಗೆ ಬಂದಿದ್ದಾರಂತೆ, ಅವರು ಅರಮನೆಯಲ್ಲಿ ಉಳಿದುಕೊಂಡಿದ್ದಾರಂತೆ. ಅವರ ಜೊತೆಯಲ್ಲಿ ಎಷ್ಟೋ ಜನ ಬಂದಿದ್ದಾರಂತೆ. ಊರಿನ ಜನ ಕೂಡ ಅವರನ್ನು ಕಾಣಲು ಹೋಗುತ್ತಿದ್ದಾರೆ. ಲಾಲಾ, ನೀನು ಹೋಗಿ ಅವರನ್ನು ಕಂಡು ಬರುತ್ತೀಯಾ?'' ಎಂದು ಮುಗ್ಧೆ ಕೇಳಿದಳು. ಮತ್ತೆ ಕೂಡಲೇ ತಾನೇ ಸ್ವಾಮೀಜಿಯವರನ್ನು ಉದ್ದೇಶಿಸಿ, ''ಮಗು, ಈಗಂತೂ ನೀನು ತುಂಬ ಹಸಿದಿದ್ದೀಯಾ. ಮೊದಲು ಬಿಸಿ ಬಿಸಿ 'ಟಿಕ್ಕಡ' ಮಾಡಿಕೊಡುತ್ತೇನೆ. ತಿಂದು ವಿಶ್ರಮಿಸಿ ಆ ಸಾಧುವನ್ನು ಭೇಟಿ ಮಾಡಿ ಬಾ. ಅವರು ತುಂಬ ದೊಡ್ಡ ಸಾಧುವಂತೆ, ನಿನ್ನನ್ನು ಒಳಗಡೆ ಬಿಡುವರೋ ಇಲ್ಲವೋ. ಆದರೂ ನೀನು ಪ್ರಯತ್ನಿಸುತ್ತೀಯಲ್ಲವೆ?'' ಎಂದು ನುಡಿದಳು. ಆಗ ಸ್ವಾಮೀಜಿ ಅವಳ ನಿರ್ಮಲ ಪ್ರೀತಿಗೆ, ನಿಷ್ಕಪಟ ಮುಗ್ಧತೆಗೆ ಮಾರುಹೋಗಿ, ಮನದಲ್ಲಿಯೇ ನಗುತ್ತ ''ಓ ಅಮ್ಮಾ, ನೀನು ಸಹ ಅಲ್ಲಿಗೆ ಹೋಗಿ ಆ ಸಾಧುವನ್ನು ನೋಡಲು ಇಚ್ಛಿಸುತ್ತಿದ್ದೀಯಾ? ನೋಡು, ಆ ಸಾಧು ಬೇರೆ ಯಾರೂ ಅಲ್ಲ, ನಾನೇ'' ಎಂದರು. ಆಗ ಆ ವೃದ್ಧೆ ತನ್ನ ಲಾಲಾ ಸುಮ್ಮನೆ ಚೇಷ್ಟೆ ಮಾಡುತ್ತಿದ್ದಾನೆ ಎಂದು ಭಾವಿಸಿ, ''ನೀನೇಕೆ ಆ ಸಾಧು ಆಗ್ತೀಯಾ? ನೀನು ನನ್ನ ಮಗ ಲಾಲಾ, ನನ್ನ ಕಂದ. ನೀನೂ ಬಡವ, ನಾನಂತೂ ಕಡುಬಡವಿ'' ಎನ್ನುತ್ತ ಒಲೆಯ ಮೇಲಿನ ಬಿಸಿ ಬಿಸಿ ದಪ್ಪನೆಯ ಚಪಾತಿಗಳನ್ನು ಸ್ವಾಮೀಜಿಯವರ ಕೈಗಳಿಗೆ ನೀಡಿದಳು. ಚಪಾತಿಗೆ ಅಂಟಿದ್ದ ಒಲೆಯಲ್ಲಿನ ಬೂದಿಯನ್ನು ಕೈಯಿಂದ ಹೋಗಲಾಡಿಸಿ ಎರಡು ಟಿಕ್ಕಡಗಳನ್ನು ಒಂದರ ಮೇಲೊಂದು ಇಟ್ಟುಕೊಟ್ಟಳು. ಸ್ವಾಮೀಜಿ ಆ ದಪ್ಪನೆಯ ಚಪಾತಿಗಳನ್ನು ಪರಮಾನಂದದಿಂದ ಸೇವಿಸತೊಡಗಿದರು. ಅವರು ಆ ವೃದ್ಧೆ ವಿಧವೆ ತಯಾರಿಸಿದ ಆಹಾರವನ್ನು ಅತ್ಯಂತ ಪರಿಶುದ್ಧ ಹಾಗೂ ಪವಿತ್ರ ಎಂದು ಪರಿಗಣಿಸುತ್ತಿದ್ದರು.

ಸ್ವಾಮೀಜಿ ಭೋಜನ ಸೇವಿಸಿ ಅವಳ ಮನೆಯಿಂದ ಹೊರಟ ನಂತರ ಅವರ ಜೊತೆಯಲ್ಲಿ ವಾಯುವಿಹಾರಕ್ಕೆ ಬಂದಿದ್ದ ಸಹಚರರು ಈ ಸೌಭಾಗ್ಯಶಾಲಿ ಬಡ ವೃದ್ಧೆ ಯಾರು ಎಂದು ತಿಳಿದುಕೊಳ್ಳಲು ಅವಳ ಮನೆಯೊಳಕ್ಕೆ ಹೋಗಿ ವಿಚಾರಿಸಿದರು. ಅವಳು ತನ್ನ ಹೆಸರು 'ಸುಶೀಲಾ ಮಾಥುರ್' ಎಂದು ಹೇಳಿದಳು. ತನ್ನ ಪತಿಯ ಮರಣದ ನಂತರ, ಆತನ ಸಂಬಂಧಿಗಳು ಇದ್ದ ಒಂದು ಚೂರು ಆಸ್ತಿ ಹಾಗೂ ಮನೆಗಳನ್ನು ಕಬಳಿಸಿಬಿಟ್ಟಿದ್ದರಿಂದ ತಾನು ಒಂದು ಗುಡಿಸಿಲಿನಲ್ಲಿ ವಾಸವಾಗಿದ್ದೇನೆ ಎಂದು ಆಕೆ ತಿಳಿಸಿದಳು.

ಸ್ವಾಮಿ ವಿವೇಕಾನಂದರು ಆಳ್ವಾರ್‌ನಿಂದ ಹೊರಡುವಾಗ ಅವಳಿಗೆ, ತಮಗೋಸ್ಕರ ಗೋಧಿಯ ಹಿಟ್ಟು, ಕಡಲೆಹಿಟ್ಟು ಹಾಗೂ ಧಾನ್ಯದ ಹಿಟ್ಟಿನ ಮಿಶ್ರಣದಿಂದ ಹಲವಾರು ಟಿಕ್ಕಡಗಳನ್ನು ಮಾಡಿಕೊಡುವಂತೆ ಕೇಳಿಕೊಂಡಿದ್ದರು. ಅದೇ ರೀತಿ ಅವಳು ಅತ್ಯಂತ ಉತ್ಸಾಹದಿಂದ ಸ್ವಾಮೀಜಿಗೋಸ್ಕರ ಬಹಳಷ್ಟು ದಪ್ಪನೆಯ ಚಪಾತಿಗಳನ್ನು ತಯಾರಿಸಿ, ಅವರ ಬರವಿಗೋಸ್ಕರ ಕಾಯುತ್ತ ಕುಳಿತಿದ್ದಳು. ಸ್ವಾಮಿ ವಿವೇಕಾನಂದರು ಆಳ್ವಾರ್‌ನಿಂದ ಹೊರಡುವ ದಿನ ಅವಳ ಗುಡಿಸಿಲಿಗೆ ಬಂದು ಒಂದೆರಡು ಟಿಕ್ಕಡ ಸೇವಿಸಿ ತಮ್ಮ ಇತರ ಸ್ನೇಹಿತರಿಗೂ ಹಂಚಿದರು. ಉಳಿದ ಚಪಾತಿಗಳನ್ನು ಕಲ್ಕತ್ತೆಯ ಮಠಕ್ಕೆ ಹೊರಟಿದ್ದ ತಮ್ಮ ಗುರುಭಾಯಿಗಳೊಂದಿಗೆ ಕಳಿಸಿ, ಇತರ ಸೋದರ ಸಂನ್ಯಾಸಿಗಳಿಗೂ ನೀಡುವಂತೆ ತಿಳಿಸಿದ್ದರು.

ಸ್ವಾಮಿ ವಿವೇಕಾನಂದರ ಮಹಾಸಮಾಧಿಯ ನಂತರ ಎಷ್ಟೋ ವರ್ಷಗಳಾದ ಮೇಲೆ ಸುಶೀಲಾ ಮಾಥುರ್ ಇಹಲೋಕ ತ್ಯಜಿಸಿದಳು. 'ಗಝುಫರ ಆಲಿ' ಎಂಬ ಒಬ್ಬ ಶಿಕ್ಷಿತ ಮುಸಲ್ಮಾನ್ ಯುವಕನಿಗೆ ಸ್ವಾಮೀಜಿ, ಅವಳ ಯೋಗಕ್ಷೇಮವನ್ನು ಯಾವಾಗಲೂ ನೋಡಿಕೊಳ್ಳುವಂತೆ ವಿನಂತಿಸಿಕೊಂಡಿದ್ದರು. ಸ್ವಾಮೀಜಿಯವರ ಸಲಹೆಯ ಮೇರೆಗೆ ಗಝುಫರ ಆಲಿ ಸುಶೀಲಾ ಮಾಥುರಳ ಬದುಕಿನ ಕೊನೆಯ ಕ್ಷಣದವರೆಗೂ ಅವಳನ್ನು ಅತ್ಯಂತ ಕಾಳಜಿಪೂರ್ವಕ ನೋಡಿಕೊಂಡು, ಸ್ವಾಮೀಜಿಯವರ ವಿಶೇಷ ಕೃಪೆಗೆ ಪಾತ್ರನಾದನು.